ಬೈಂದೂರು ಸೋಮೇಶ್ವರ ಕಡಲು ಕಿನಾರೆಯ ಪ್ರವಾಸೋದ್ಯಮ ಅಭಿವೃದ್ಧಿ.

544(524)

ಶ್ರೀ ಗೋಪಾಲ ಪೂಜಾರಿ ಕೆ.(ಬೈಂದೂರು): ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೈಂದೂರು-ಸೋಮೇಶ್ವರ ಕಡಲು ಕಿನಾರ್ ಪ್ರವಾಸೋದ್ಯಮ ಕೇಂದ್ರವೆಂದು ಸರಕಾರದ ಪರಿಗಣನೆಯಲ್ಲಿದೆಯೇ?

ಆ) ಪರಿಗಣನೆಯಲ್ಲಿದ್ದಲ್ಲಿ ಇದರ ಅಭಿವೃದ್ಧಿ ಬಗ್ಗೆ ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಆರ್.ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು):

ಅ) ಹೌದು.

ಆ) ಬೈಂದೂರು ಸೋಮೇಶ್ವರ ಕಡಲು ತೀರದ ಅಭಿವೃದ್ಧಿ ಬಗ್ಗೆ ಸರ್ಕಾರ ಸದ್ಯಕ್ಕೆ ಯಾವುದೇ ಕಾರ್ಯಕ್ರಮ ಹಾಕಿಕೊಂಡಿರುವುದಿಲ್ಲ.

ಕುಂದಾಪುರ ತಾಲ್ಲೂಕಿನ ಕೋಡೇರಿ ಕಿರು ಬಂದರಿನ ವಿಚಾರ.

545(527)

ಶ್ರೀ ಗೋಪಾಲ ಪೂಜಾರಿ ಕೆ.(ಬೈಂದೂರು): ಮಾನ್ಯ ಮೀನುಗಾರಿಕೆ ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಕೋಡೇರಿ ಕಿರು ಬಂದರಿನ ವಿಚಾರ ಯಾವ ಹಂತದಲ್ಲಿದೆ.

ಆ) ಈ ಕೋಡೇರಿ ಕಿರು ಬಂದರಿನ ನಿರ್ಮಾಣಕ್ಕೆ ಸರ್ಕಾರ ಮುಂದೆ ಕೈಗೊಳ್ಳುವ ಕ್ರಮಗಳೇನು?

ಶ್ರೀ ಬಿ.ರಮಾನಾಥ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು):